ವಾತಾವರಣವನ್ನು ಸೃಷ್ಟಿಸುತ್ತದೆ.

ಸಾಂತಾ ಡೊಮಿಂಗೊ ಚರ್ಚ್‌ನ ಪಕ್ಕದಲ್ಲೇ ಇರುವ ‘ಒಹಾಕಾ ಕಲ್ಚರಲ್ ಮ್ಯೂಸಿಯಂ’ ತಪ್ಪದೇ ನೋಡಬೇಕಾದ ಇನ್ನೊಂದು ಆಕರ್ಷಣೆ. ಹದಿನಾಲ್ಕು ವಿಶಾಲ ಹಜಾರಗಳಲ್ಲಿ ಓರಣವಾಗಿ ಪ್ರದರ್ಶನಗೊಂಡಿರುವ ಸಾವಿರಾರು ಕಲಾಕೃತಿಗಳು, ಒಹಾಕಾ ಸಂಸ್ಕೃತಿ ಮತ್ತು ನಾಗರಿಕತೆಯ ಬೆಳವಣಿಗೆಯನ್ನು ತುಂಬಾ ಚೆನ್ನಾಗಿ ಬಿಂಬಿಸುತ್ತವೆ.

ಸಾಂತಾ ಡೊಮಿಂಗೊ ಚರ್ಚ್‌ನ ಹಿಂಬದಿಯಲ್ಲೇ ಇರುವ ಬೊಟಾನಿಕಲ್ ಗಾರ್ಡನ್‌ನಲ್ಲಿರುವ ಅಗಣಿತ ಕಳ್ಳಿಗಿಡಗಳ ಸಂಗ್ರಹ ನಿಜಕ್ಕೂ ಅದ್ಭುತ.

ಜೊಕೊಲೊ ಚೌಕ ಒಹಾಕಾ ನಗರದ ಹೃದಯವಿದ್ದಂತೆ. ಎಂದೂ ನಿಲ್ಲದೆ ಸದಾ ಬಡಿಯುವ ನಮ್ಮ ಹೃದಯದಂತೆ. ಈ ಚೌಕ ಹಗಲು ರಾತ್ರಿಯನ್ನದೆ ಸ್ಥಳೀಯರಿಂದ ಮತ್ತು ಪ್ರವಾಸಿಗರಿಂದ ಕಿಕ್ಕಿರಿದಿರುತ್ತದೆ. ಈ ಚೌಕ ಮತ್ತು ಅದಕ್ಕೆ ಸೇರುವ ರಸ್ತೆಗಳಲ್ಲಿ ಸಂಪೂರ್ಣ ವಾಹನ ನಿಷೇಧವಿರುವುದರಿಂದ, ಯಾವುದೇ ಅಡಚಣೆಗಳಿಲ್ಲದೆ, ಜನರು ನಿರಾಳವಾಗಿ ಓಡಾಡುತ್ತ ಹರಟುತ್ತ, ತಮಾಷೆ ಮಾಡುತ್ತ, ಗಮ್ಮತ್ತು ಮಾಡುತ್ತಾರೆ. ಸೊಂಪಾದ ಮರಗಳಿಂದ ಸುತ್ತುವರಿದು, ಸದಾ ತಂಪಾಗಿರುವ ಈ ಚೌಕ ಯುವಪ್ರೇಮಿಗಳ ಮೆಚ್ಚಿನ ತಾಣವೂ ಹೌದು. ಅಬ್ಬರದ ಸ್ಪ್ಯಾನಿಶ್ ಸಂಗೀತ ನುಡಿಸುವ ವಾದ್ಯ ವೃಂದಗಳು, ಅದರ ತಾಳಕ್ಕೆ ಹೆಜ್ಜೆ ಹಾಕುತ್ತ, ಸೊಗಸಾಗಿ ಕುಣಿಯುವ ಬೀದಿ ನರ್ತಕರು, ಶಿಳ್ಳೆ ಹೊಡೆಯುತ್ತ ಚಪ್ಪಾಳೆ ತಟ್ಟುತ್ತ ಅವರನ್ನು ಹುರಿದುಂಬಿಸುವ ವೀಕ್ಷಕರು. ಎರಡು ಕಾಸಿನ ಬಲೂನಿಂದ ಹಿಡಿದು ನೂರಾರು ಡಾಲರುಗಳ ರತ್ನಗಂಬಳಿಯವರೆಗೆ ನಡೆಯುವ ಬೀದಿ ವ್ಯಾಪಾರ, ಚೌಕಾಸಿ ಮಾಡುವ ಶಾಪಿಂಗ್ ಪ್ರಿಯರ ಸ್ವರ್ಗ ಆ ಚೌಕ. ಚೌಕದ ಸುತ್ತಲೂ ಹಬ್ಬಿರುವ ಹಲವಾರು ಕೆಫೆಗಳಲ್ಲಿ ತಂಪಾಗಿ ಕೂತು, ತಿಂಡಿ–ತೀರ್ಥ ಸೇವಿಸುತ್ತ ಹೊರಗಿನ ವಿನೋದಗಳನ್ನು ನೋಡುತ್ತಾ ಕೂತರೆ ಸಮಯ ಸರಿದದ್ದೇ ಗೊತ್ತಾಗುವುದಿಲ್ಲ.


ಒಹಾಕಾದ ರಸ್ತೆಗಳೆಲ್ಲ ಚಿತ್ರಸಂತೆಯ ಸಂಭ್ರಮ ಸಾಮಾನ್ಯ

ಸೆರೊ ಡೆಲ್ ಫೊರ್ಟಿನ್ ಒಹಾಕಾ ನಗರದ ಮಧ್ಯಭಾಗದಿಂದ ತುಸುವೇ ದೂರದಲ್ಲಿರುವ ಗುಡ್ಡ. ಅದು ನಾಗರಿಕರ ಬೆಳಗ್ಗಿನ ವಾಕಿಂಗ್, ಜಾಗಿಂಗ್ ತಾಣ. ಮೆಟ್ಟಿಲು ಹತ್ತಿ ಮೇಲೆ ಹೋದರೆ, ಸುಂದರ ಹಸಿರು ಉದ್ಯಾನವನ ಸಿಗುತ್ತದೆ. ಅದರ ನಡುವಿನಲ್ಲಿ, 1861ರಿಂದ 1872ರವರೆಗೆ ಮೆಕ್ಸಿಕೊ ದೇಶದ ಅಧ್ಯಕ್ಷನಾಗಿದ್ದ ಬೆನಿಟೋ ಜುರೆಜ್ ಪ್ರತಿಮೆಯಿದೆ. ತನ್ನ ಸಮರ್ಥ ನಾಯಕತ್ವದಿಂದ ಆಧುನಿಕ ಮೆಕ್ಸಿಕೋದ ಪ್ರಗತಿಗೆ ಬುನಾದಿ ಹಾಕಿದ ಶ್ರೇಯಸ್ಸು ಆತನದು. ಗುಡ್ಡದ ಮೇಲಿಂದ ನಗರದ ವಿಹಂಗಮ ನೋಟ ಸಿಗುತ್ತದೆ.

ಸ್ಥಳೀಯ ಕಲಾವಿದರಿಂದ ರೂಪುಗೊಂಡ ಜಪಾಟಾ ಕಲಾಶಾಲೆಯಲ್ಲಿ ವರ್ಷವಿಡೀ ಚಿತ್ರಕಲೆಗೆ ಸಂಬಂಧಪಟ್ಟ ಪ್ರದರ್ಶನಗಳು, ತರಬೇತಿ ಶಿಬಿರಗಳು, ಉಪನ್ಯಾಸಗಳು, ಸಂದರ್ಶನಗಳು, ಪ್ರಾತ್ಯಕ್ಷಿಕೆಗಳು ನಡೆಯುತ್ತವೆ. ಆ ಶಾಲೆಯ ಆರ್ಟ್ ಕೆಫೆಟೇರಿಯಾದಲ್ಲಿ ಮೆಕ್ಸಿಕೊ ಕಾಫಿ ಸವಿಯುವುದು ಬಹು ಆಹ್ಲಾದಕರ.

ವಿವಿಧ ಕಲಾ ಪ್ರಕಾರಗಳಲ್ಲಿ, ಒಹಾಕಾದ ಕಲಾವಿದರು ಸಾಧಿಸಿರುವ ಸೃಜನಶೀಲತೆ ವಿಶೇಷವಾದುದು. ಚಿತ್ರಕಲೆ ಮತ್ತು ಶಿಲ್ಪಕಲೆಯ ಸುಂದರ ಕೃತಿಗಳು ಊರೆಲ್ಲ ಕಾಣಸಿಗುತ್ತವೆ. 1920ರ ಮೆಕ್ಸಿಕೋ ಕ್ರಾಂತಿಯ ನಂತರ, ಆಗಿನ ಯುವ ಕಲಾವಿದರು, ಮೆಕ್ಸಿಕೊ ದೇಶದ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ಜನರಲ್ಲಿ ಅರಿವು ಮತ್ತು ಜಾಗೃತಿ ಮೂಡಿಸಲು ನಿರ್ಮಿಸಿದ ಸಾರ್ವಜನಿಕ ಕಲಾಕೃತಿಗಳು ಈಗಲೂ ಕಂಗೊಳಿಸುತ್ತಿವೆ. ಸಿನಿಮಾ ಮತ್ತು ಸಾಹಿತ್ಯಗಳಲ್ಲಿ ನಡೆದ ನವ ಪ್ರಯೋಗಗಳು ಜಗತ್ತಿನ ಗಮನ ಸೆಳೆದಿವೆ. ವಿಶೇಷ ಛಾಪು ಹೊತ್ತ, ಮೆಕ್ಸಿಕನ್ ನೃತ್ಯ ಮತ್ತು ಸಂಗೀತಗಳು ಜನಜೀವನದ ಅವಿಭಾಜ್ಯ ಅಂಗಗಳೇ ಆಗಿಬಿಟ್ಟಿವೆ. ಜಾನಪದ ಕಲೆಗಳಲ್ಲೂ ಈ ಜನರು ನಿಪುಣರು. ನೇಯ್ಗೆ, ಕುಂಬಾರಿಕೆ, ಚಮ್ಮಾರಿಕೆ, ತಾಮ್ರದ ಕುಶಲ ಕಲೆ, ಬಿದಿರು ಕಲೆ, ಟೋಪಿ–ಮುಖವಾಡಗಳ ತಯಾರಿಕೆಗಳು ಜನಪ್ರಿಯ, ಲಾಭದಾಯಕ ಉದ್ಯಮಗಳಾಗಿ ಬೆಳೆದು ಬಂದಿವೆ.

ಒಹಾಕಾ ನಗರದ ದಕ್ಷಿಣದಲ್ಲಿರುವ ಪೆಸಿಫಿಕ್ ಸಾಗರ ತೀರದುದ್ದಕ್ಕೂ ಹಲವು ಪ್ರವಾಸಿ ತಾಣಗಳು, ಜಲಕ್ರೀಡಾಕೇಂದ್ರಗಳಿವೆ. ಪಶ್ಚಿಮದಲ್ಲಿ ತುಸು ದೂರವಿರುವ ಮೊಂಟೊ ಅಲ್‌ಬಾನ್ ಪ್ರಾಚೀನ ಪುರಾತತ್ವ ವಾಸ್ತು ಸ್ಥಳವಾಗಿದ್ದು, ಹಳೆಕಾಲದ ದೇವಾಲಯ, ಅರಮನೆಗಳಿಂದ ಕೂಡಿದೆ. ಉತ್ತರಕ್ಕಿರುವ ಮನ್‌ಕಮಾಂಡೊಸ್ ಎಂಟು ಹಳ್ಳಿಗಳ ಸಮೂಹವಾಗಿದ್ದು ಚಾರಣಕ್ಕೆ ಹೆಸರುವಾಸಿಯಾಗಿದೆ.

ಒಹಾಕಾ ಸಡಗರ, ಸಂಭ್ರಮಗಳ ಲವಲವಿಕೆಯ ಜೀವಂತ ನಗರ. ವರ್ಷವಿಡೀ ನಡೆಯುವ ಹಲವು ಅಂತರಾಷ್ಟ್ರೀಯ ಉತ್ಸವಗಳಲ್ಲದೆ, ದಿನನಿತ್ಯವೂ ಜರಗುವ ಪರಿಷೆಗಳು ಮೈಮನಗಳಿಗೆ ಮುದಕೊಟ್ಟು ಹುರುಪು ನೀಡುತ್ತವೆ.

ಪ್ರತಿಕ್ರಿಯಿಸಿ: feedback@sudha.co.in

